**ಕವಿತೆ**




## ಶಿಲ್ಪಾ ಮ್ಯಾಗೇರಿ

ಕಲೆ: ಸಂತೋಷ್ ಸಸಿಹಿತ್ಲು




# ಸಗಣಿಯ ಹುಳು

ಹೂವಿನ ದಳ ಕೀಳುವಾಗಲೂ
ಕಂಪಿಸುತ್ತದೆ ಹೃದಯ
ಈ ನೆಲದಲ್ಲಿ
ಉಕ್ಕಿನ ಉಗುರುಗಳಿಂದ ಹೆಣ್ಣ
ಸುಲಿದ ನಿನ್ನ ಮುಟ್ಟಲು
ಮೆಟ್ಟು ಹೇಸುತ್ತದೆ

ಕಪ್ಪು ನಾಚುತ್ತದೆ
ಅಪವ್ಯಾಖ್ಯಾನದ ನಿನ್ನ ಹೆಸರಿಗೆ
ಮನುಕುಲದ ಆದಿ ಅಂತ್ಯಕೂ ನೀ ಎಂದೂ ಕ್ಷಮಿಸದ ಅಕ್ಷಮ್ಯ
ಯಾರೂ ಬಯಸದ
ಸಗಣಿಯ ಹುಳು
ಚರಿತ್ರೆ ಕಾಣದ ಚರಂಡಿ
ನಿನ್ನ ಬೊಗಸೆಯಲ್ಲಿ ನಾರುತ್ತಿದೆ

ಉದುರುವ ಉಲ್ಕೆಗಳೆಲ್ಲ ನಿನ್ನ ಅಂಗಳಕೇ ಬಂದು ಬಿದ್ದಿರಬೇಕು
ಬೆದರಿದ ಹೆಣ್ಣುಗಳೆಲ್ಲ ನಿನ್ನಡಿಯೇ ನಲುಗಿರಬೇಕು

ಲೋಕದ ಆ ತುತ್ತತುದಿಗೂ ವಿಸ್ಮಯ
ಇಂಥ ಕೀಟ ಹುಟ್ಟಿದ್ದೆಲ್ಲಿಂದ
ಬಹುಶಃ ತಿಪ್ಪೆ
ಮನೆಯಿಂದಲೇ ಸಿದ್ಧಗೊಂಡಿರಬೇಕು

ಮತ ಕೊಟ್ಟು
ಮಾತು ಕೊಟ್ಟು
ಕಡೆಗೆ ಮಾನವನ್ನು ಕೊಟ್ಟು
ಸತ್ತ ನಾಲಿಗೆ ಬಿಡುವುದೇ

ಎಲ್ಲ ಎಲ್ಲೆ ಮೀರಿದ ನಿನ್ನ
ಅವ್ವನ ಸೆರಗು
ಮಗಳ ನೆರಿಗೆ
ಅವಳ ಇವಳ ಬೆತ್ತಲೆಗೊಳಿಸಿದ
ನಿನ್ನ ಸಾಕ್ಷ್ಯ ಸಾಕ್ಷಿಯಲ್ಲ
ನಿನ್ನದೇ ಮಲ ನೀನೇ ತಿಂದ ಹೆಗ್ಗುರುತು

ನಿನ್ನವ್ವನ ನೀ ಹೇಗೆ ದಿಟ್ಟಿಸುವೆ ಹೇಳು
ಅನ್ನವಿಳಿಯದ ಬಾಯಿಯಿಂದ ಮಾತ್ರ ಸಾಧ್ಯ ಈ
ನಿರ್ಲಜ್ಜೆ

ಹೆಣ್ಣು ನಾಚುವುದಲ್ಲ ಇಲ್ಲಿ
ಗಂಡೆಂದು
ಆಗುಮಾಡಿದ
ಒತ್ತೇರಿದ ನಿನ್ನ ನರನಾಡಿಗೂ
ಮತ್ತೇರಿದ ನಿನ್ನರಿವಿನ ಒಣ ಸೋಗಿನ
ಕಾರ್ಕೋಟಕ ವಿಷಕ್ಕೂ
ನಿನಗಿರಲಿ
ನಿನ್ನವ್ವನದೇ ಧಿಕ್ಕಾರ.